# ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಹಗಲಲ್ಲೂ ಉರಿವ ಬೀದಿದೀಪ!



ಹುಬ್ಬಳ್ಳಿ: ಕಲ್ಯಾಣ ಕರ್ನಾಟಕದ ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಹಗಲಿನಲ್ಲಿಯೂ ಬೀದಿ ದೀಪಗಳು ಉರಿಯುತ್ತಿರುವ ಕುರಿತು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ವಿ.ಸುನೀಲಕುಮಾರ ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿಯವರು ಪತ್ರ ಬರೆದು ವಿದ್ಯುತ್ ಮಹತ್ವದ ಕುರಿತು ಹಾಗೂ ಉಳಿತಾಯ ಹೇಗೆ ಮಾಡಬೇಕೆಂಬ ಜಾಗೃತಿ ಕುರಿತು ಸುದೀರ್ಘವಾಗಿ ಪತ್ರ ಬರೆದು ಗಮನ ಸೆಳೆದಿದ್ದಾರೆ. ಪತ್ರದ ಸಾರ ಇಂತಿದೆ.....

ನಾನು ಜ.24 ಮತ್ತು 25ರಂದು ರಾಯಚೂರು ಹಾಗೂ ಹೊರ ರಾಜ್ಯ ಆಂಧ್ರಪ್ರದೇಶದ ಮಂತ್ರಾಲಯದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಸ್ತೆ ಮೂಲಕ ಹೋಗುವ ಸಂದರ್ಭದಲ್ಲಿ ಕೊಪ್ಪಳ ದಾಟಿದ ನಂತರ ಗಂಗಾವತಿ, ಸಿಂಧನೂರ, ಮಾನವಿ, ಗೋರಕಲ್ ಸೇರಿದಂತೆ ಬಹುತೇಕ ಎಲ್ಲ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದಲ್ಲಿ ನಿರಂತರ ಹಗಲಿನಲ್ಲಿಯೂ ವಿದ್ಯುತ್ ಬೀದಿ ದೀಪಗಳು ಉರಿಯುವುದನ್ನು ನೋಡಿದೆ. ಇದರಿಂದ ಮನಸ್ಸಿಗೆ ತುಂಬಾ ಬೇಸರವಾಯಿತು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸರಕಾರದ ಬಹುತೇಕ ಹೆಚ್ಚು ಹಣ ವಿನಿಯೋಗವಾಗುತ್ತಿದೆ. ಆದರೆ ವಿದ್ಯುತ್ ಉಳಿತಾಯದ ಅರಿವನ್ನು ಮೂಡಿಸುವ ಕೆಲಸ ಆಗದೇ ಇರುವುದು ವಿಷಾದದ ಸಂಗತಿ.

ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ, ಕಿತ್ತೂರು ಕರ್ನಾಟಕ ಭಾಗದ ಪಟ್ಟಣ ಹಾಗೂ ಊರುಗಳಿಗೆ ಸಮರ್ಪಕ ವಿದ್ಯುತ್ ನೀಡಲು ಸಾಧ್ಯವಾಗುತ್ತಿಲ್ಲ. ಅದರಲ್ಲಂತೂ ಗ್ರಾಮೀಣ ಭಾಗದ ಹಳ್ಳಿಗಳಿಗೆ, ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ಸರಕಾರ ಎದುರಿಸುತ್ತಿರುವ ಸಮಸ್ಯೆಯನ್ನು ನಾನು ಕಣ್ಣಾರೆ ಕಂಡಿದ್ದೇನೆ. ಹಲವಾರು ಬಾರಿ ನನ್ನ ಬಳಿ ಬಂದ ರೈತರ ನಿಯೋಗದೊಂದಿಗೆ ಚರ್ಚಿಸಿದಾಗ ವಿದ್ಯುತ್ ಸಮಸ್ಯೆಯೇ ನಮಗೆ ಹೆಚ್ಚು ಕಾಡುತ್ತಿದೆ ಎಂಬ ಅವರ ನೋವನ್ನು ಆಲಿಸಿದ್ದೇನೆ.

ಈ ವಿಷಯದ ಕುರಿತು ಹಲವಾರು ಬಾರಿ ಇಂಧನ ಇಲಾಖೆಯ ಪ್ರಮುಖ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಹಗಲಿನಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ನೀಡದೇ ಇರುವ ಕುರಿತು ಕೂಡ ಸಾಕಷ್ಟು ಬಾರಿ ಚರ್ಚೆಯಾಗಿದೆ.

ಈ ಸಮಸ್ಯೆ ಅತ್ಯಂತ ಮಹತ್ವ ಹಾಗೂ ಗಂಭೀರವಾಗಿದ್ದು, ಇಂಧನ ಇಲಾಖೆಯ ಸಿಬ್ಬಂದಿಗೆ ಇಂಧನದ ಮಹತ್ವ ಹಾಗೂ ಉಳಿತಾಯದ ಕುರಿತು ಅರಿವನ್ನು ಹೆಚ್ಚೆಚ್ಚು ಮೂಡಿಸಿದರೆ ವಿದ್ಯುತ್ ಉಳಿತಾಯ ಮಾಡಿದಂತಾಗುತ್ತದೆ. ತಾವು ತಕ್ಷಣ ಈ ಮಹತ್ವದ ವಿಷಯ ಕುರಿತು ಗಮನ ಹರಿಸಬೇಕು. ಆ ಭಾಗದ ಸಂಬಂಧಿಸಿದ ಜವಾಬ್ದಾರಿಯುತ ಅಧಿಕಾರಿಗಳಿಗೆ ಎಚ್ಚರಿಕೆ ಕೊಡುವುದರ ಜೊತೆಗೆ ಮುಂದೆ ಹೀಗಾಗದಂತೆ ನೋಡಿಕೊಳ್ಳುವ ಸೂಚನೆಯನ್ನು ನೀಡಬೇಕು ಎಂದು ಸಭಾಪತಿಗಳು ಪತ್ರದಲ್ಲಿ ಸಲಹೆ ನೀಡಿದ್ದಾರೆ.

Scanned with OKEN Scanner